# ಕರ್ನಾಟಕ ಸರ್ಕಾರ

## ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ.

## ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ.

***ಸಂಖ್ಯೆ: ಎಡಿಎಫ್/ಎಡಿಸಿ/52/2012-13*** ***ದಿನಾಂಕ:21-09-2013***

ವಿಷಯ: ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 63ರಡಿ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಪಾವತಿಸಬೇಕಾದ ಸಂಭಾವನೆಯನ್ನು ಸಹಕಾರ ಸಂಘದ ಮಹಾಸಭೆಯು ನಿಗದಿಪಡಿಸುವ ಬಗ್ಗೆ ಮಾರ್ಗಸೂಚಿಗಳು – ಹೊರಡಿಸುವ ಕುರಿತು.

ಉಲ್ಲೇಖ:
1) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಕಾಯ್ದೆ 2012 ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 71 ಶಾಸನ 2012, ಬೆಂಗಳೂರು, ದಿನಾಂಕ: 11.01.2013.
2) ಸಹಕಾರ ಸಚಿವಾಲಯ ಅಧಿಸೂಚನೆ ಸಂಖ್ಯೆ:ಸಿಒ 164:ಸಿಎಲ್‌ಎಂ 2012, ದಿನಾಂಕ: 08.02.2013.
3) ಸಹಕಾರ ಸಚಿವಾಲಯ ಅಧಿಸೂಚನೆ ಸಂಖ್ಯೆ : ಸಿಒ/14/ ಸಿಎಲ್‌ಎಂ 2013 ದಿನಾಂಕ 10.07.2013ರಂತೆ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013.
4) ಸರ್ಕಾರದ ಆದೇಶ ಸಂಖ್ಯೆ:ಸಿಒ 49 ಸಿಎಲ್‌ಎಂ 2007, ಬೆಂಗಳೂರು. ದಿನಾಂಕ 08/03/2007.
5) ಸರ್ಕಾರದ ಆದೇಶ ಸಂಖ್ಯೆ:ಸಿಒ 198. ಸಿಎಲ್‌ಎಂ 2010, ದಿನಾಂಕ: 04-01-2011.
6) ಸರ್ಕಾರದ ಪತ್ರ ಸಂಖ್ಯೆ:ಸಿಒ 31 ಸಿಎಲ್‌ಎಂ 2013 ದಿನಾಂಕ:13.09.2013

*******

**ಪ್ರಸ್ತಾವನೆ:**

ಉಲ್ಲೇಖ(1)ರ ಅಧಿಸೂಚನೆಯಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ಕ್ಕೆ ತಿದ್ದುಪಡಿಯಾಗಿದೆ. ಸಹಕಾರ ಸಂಘಗಳ ಕಾಯ್ದೆ ಕಲಂ 63(19)ರನ್ವಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಕಾರ್ಯಕ್ಕೆ ಸಂಭಾವನೆಯನ್ನು ಆಯಾ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ನಿರ್ಧರಣೆ ಮಾಡಬೇಕಾಗಿರುತ್ತದೆ. ಉಲ್ಲೇಖ(2)ರ ಅಧಿಸೂಚನೆಯಂತೆ, ಈ ತಿದ್ದುಪಡಿಗಳು ದಿನಾಂಕ:11.02.2013ರಿಂದ ಜಾರಿಗೆ ಬಂದಿರುತ್ತದೆ. ಉಲ್ಲೇಖ(3)ರ ಅಧಿಸೂಚನೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013 ಜಾರಿಗೆ ಬಂದಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 30ರಲ್ಲಿ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸಿದ್ದಕ್ಕೆ ಪಾವತಿಸಬೇಕಾದ ಸಂಭಾವನೆಯನ್ನು ಆಯಾ ಸಹಕಾರ ಸಂಘದ ಸಾಮಾನ್ಯ ಸಭೆಯು ಸಂಘದ ದುಡಿಯುವ ಬಂಡವಾಳ ಮತ್ತು

ವ್ಯಾಪಾರ ವಹಿವಾಟನ್ನು ಆಧರಿಸಿ ನಿಗದಿಪಡಿಸಲು ಅವಕಾಶವಿರುತ್ತದೆ. ಸಹಕಾರ ಸಂಘಗಳು ಲೆಕ್ಕಪರಿಶೋಧನಾ ಶುಲ್ಕವನ್ನು ನಿಗದಿಪಡಿಸಿಕೊಳ್ಳಲು ಸಹಾಯಕವಾಗುವಂತೆ ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಇವರು ಕಾಲಕಾಲಕ್ಕೆ ಮಾರ್ಗಸೂಚಿಗಳನ್ನು ನೀಡಲು ಸಹಕಾರ ಸಂಘಗಳ ನಿಯಮ 30ರನ್ವಯ ಅವಕಾಶವಿರುತ್ತದೆ. ಉಲ್ಲೇಖ(6)ರ ಸರ್ಕಾರದ ಪತ್ರದಲ್ಲಿ ಈ ಮಾರ್ಗಸೂಚಿಗಳನ್ನು ನೀಡಲು ಅನುಮತಿ ನೀಡಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ 30ರಲ್ಲಿನ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ, ಮಾರ್ಗಸೂಚಿಗಳನ್ನು ನೀಡಲಾಗಿದೆ.

## ಮಾರ್ಗಸೂಚಿಗಳು

ಸಹಕಾರ ಸಂಘಗಳ ಸಾಮಾನ್ಯ ಸಭೆಯಲ್ಲಿ ಸಂಸ್ಥೆಯ ದುಡಿಯುವ ಬಂಡವಾಳ ಹಾಗೂ ವ್ಯಾಪಾರ ವಹಿವಾಟುಗಳನ್ನು ಆಧರಿಸಿ ಲೆಕ್ಕಪರಿಶೋಧನಾ ಸಂಭಾವನೆಯನ್ನು ನಿಗದಿಪಡಿಸುವಾಗ, ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಬಹುದಾಗಿದೆ.

| ಕ್ರ. ಸಂ. | ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟು | ಲೆಕ್ಕಪರಿಶೋಧನಾ ಸಂಭಾವನೆ ಮಾರ್ಗಸೂಚಿ ದರ |
|---|---|---|
| 1. | ಸಂಸ್ಥೆಯ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟು ರೂ. 10.00 ಕೋಟಿಗಳವರೆಗೆ | ಪ್ರತಿ ಒಂದು 100 ರೂ.ಗಳ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟಿಗೆ 10 ಪೈಸೆಯಂತೆ ಗರಿಷ್ಠ ರೂ. 75,000-00 |
| 2. | ಸಂಸ್ಥೆಯ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟು ರೂ.10 ಕೋಟಿ ಮೀರಿ ರೂ. 50.00 ಕೋಟಿಗಳವರೆಗೆ | ರೂ.75,000+10 ಕೋಟಿ ಮೀರಿದ ಪ್ರತಿ 100ರೂ.ಗಳ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟಿಗೆ 5 ಪೈಸೆ ಯಂತೆ. ಗರಿಷ್ಠ ರೂ. 1,50,000-00 |
| 3. | ಸಂಸ್ಥೆಯ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟು ರೂ. 50 ಕೋಟಿ ಮೀರಿ ರೂ. 100.00 ಕೋಟಿಗಳವರೆಗೆ | ರೂ.1,50,000+ರೂ 50 ಕೋಟಿ ಮೀರಿದ ಪ್ರತಿ 100ರೂ.ಗಳ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟಿಗೆ 5 ಪೈಸೆಯಂತೆ.ಗರಿಷ್ಠ ರೂ. 2,50,000-00 |
| 4. | ಸಂಸ್ಥೆಯ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟು ರೂ. 100 ಕೋಟಿ ಮೇಲ್ಪಟ್ಟು | ರೂ.2,50,000-00.+100 ಕೋಟಿಗೆ ಮೀರಿದ ಪ್ರತಿ 100ರೂ.ಗಳ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟಿಗೆ 2 ಪೈಸೆಯಂತೆ. ಗರಿಷ್ಠ ರೂ.10,00,000-00 |

ಪರಂತು ಪಟ್ಟಣ ಸಹಕಾರ ಬ್ಯಾಂಕುಗಳು ಈ ಹಿಂದೆ ಉಲ್ಲೇಖ (4) ಮತ್ತು (5)ರಲ್ಲಿನ ಸರ್ಕಾರಿ ಆದೇಶದಲ್ಲಿ ಸೂಚಿಸಿರುವ ದರಗಳನ್ನು ಗಮನದಲ್ಲಿಟ್ಟುಕೊಂಡು ಲೆಕ್ಕಪರಿಶೋಧಕರ ಸಂಭಾವನೆಯನ್ನು ನಿಗದಿಪಡಿಸಿಕೊಳ್ಳಬಹುದಾಗಿರುತ್ತದೆ.

1. ಸರ್ವ ಸದಸ್ಯರ ಸಭೆಯಲ್ಲಿ ನಿರ್ಧರಣೆ ಮಾಡುವ ಲೆಕ್ಕಪರಿಶೋಧನಾ ಸಂಭಾವನೆಯು ಪ್ರಯಾಣ ವೆಚ್ಚ, ವರದಿ ಸಿದ್ಧತೆ ವೆಚ್ಚಗಳನ್ನು ಒಳಗೊಂಡಿರುವುದು.

2. ಪ್ರತಿಯೊಂದು ಸಹಕಾರ ಸಂಘವು, ಲೆಕ್ಕಪರಿಶೋಧಕರ/ಲೆಕ್ಕಪರಿಶೋಧನಾ ಸಂಸ್ಥೆಯೊಂದಿಗೆ ಸಂಭಾವನೆ ದರವನ್ನು ಸಂಧಾನದ ಮೂಲಕ ತೀರ್ಮಾನಿಸಿಕೊಳ್ಳಲು ಸ್ವತಂತ್ರರಾಗಿರುತ್ತವೆ.

3. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಅಧಿಕಾರಿಗಳು/ಲೆಕ್ಕಪರಿಶೋಧಕರು ನಿರ್ವಹಿಸುವ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ, ಈ ಮಾರ್ಗಸೂಚಿಯಲ್ಲಿರುವ ದರಗಳನ್ನು ಅನುಸರಿಸಿ ಲೆಕ್ಕಪರಿಶೋಧನಾ ಶುಲ್ಕವನ್ನು ಸರ್ಕಾರಕ್ಕೆ ಪಾವತಿಸಬೇಕು.

4. ಸಂಬಂಧಪಟ್ಟ ಲೆಕ್ಕಪರಿಶೋಧಕರು/ಲೆಕ್ಕಪರಿಶೋಧಿಸುವ ಸಂಸ್ಥೆ ಲೆಕ್ಕಪರಿಶೋಧನಾ ವರದಿ ಬಿಡುಗಡೆ ಮುಂಚಿದ ನಂತರ, ಲೆಕ್ಕಪರಿಶೋಧನಾ ಸಂಭಾವನೆ ಪಾವತಿಸಲು ಸಂಘಕ್ಕೆ ಬಿಲ್ಲನ್ನು ನೀಡಿ ಸಂಘದಿಂದ ಸಂಭಾವನೆಯನ್ನು ನೇರವಾಗಿ ಪಡೆಯುವುದು ಮತ್ತು ಸಹಕಾರ ಸಂಘಕ್ಕೆ ಅಧಿಕೃತ ರಸೀತಿಯನ್ನು ನೀಡತಕ್ಕದ್ದು.

ಪರಂತು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಸಿಬ್ಬಂದಿ ನಿರ್ವಹಿಸಿದ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಸಂಬಂಧಿಸಿದ ಲೆಕ್ಕಪರಿಶೋಧಕರು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಲೆಕ್ಕಪರಿಶೋಧನಾ ಸಂಭಾವನೆಯನ್ನು ಜಮಾ ಮಾಡತಕ್ಕದ್ದು, ಸಂಘವು ಸದರಿ ಮೊತ್ತವನ್ನು "0425-00-101-0-01 ಲೆಕ್ಕಪರಿಶೋಧನಾ ಶುಲ್ಕ" ಲೆಕ್ಕಶೀರ್ಷಿಕೆಯಲ್ಲಿ ಖಜಾನೆಗೆ ಪಾವತಿ ಮಾಡಿ, ಚಲನ್ ಪ್ರತಿಯನ್ನು ಸಂಬಂಧಿಸಿದ ಲೆಕ್ಕಪರಿಶೋಧಕರು ಹಾಗೂ ಜಿಲ್ಲಾ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರಿಗೆ ನೀಡುವುದು.

ಈ ಮಾರ್ಗಸೂಚಿಗಳು ಈ ಕೂಡಲೇ ಜಾರಿಗೆ ಬರುತ್ತಿದ್ದು, ಹಾಗೂ ಬಾಕಿಯಿರುವ ಲೆಕ್ಕಪರಿಶೋಧನೆ ಸೇರಿದಂತೆ ಎಲ್ಲಾ ಸಾಲುಗಳ ಲೆಕ್ಕಪರಿಶೋಧನೆಗೆ ಈ ದಿನಾಂಕ ಹಾಗೂ ನಂತರ ನೇಮಕ ಮಾಡುವ ಎಲ್ಲಾ ಲೆಕ್ಕಪರಿಶೋಧಕರು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗೆ ಅನ್ವಯವಾಗುತ್ತದೆ.

ನಿರ್ದೇಶಕರು

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ